ಮಕ್ಕಳೊಂದಿಗೆ ತಮ್ಮ ಬಂಧು ಬಳಗವನ್ನೆಲ್ಲಾ ಕರೆದುಕೊಂಡು ಸ್ಟೇಷನ್‌ಗೆ ಹೊರಡಲು ಸಿದ್ಧಳಾದಳು. ಕರಿವೀರನಿಗೆ ಈ ವಿಷಯವನ್ನು ತಿಳಿಸಿ ಅವನನ್ನೂ ಬರುವಂತೆ ಕರೆದಳು. ಕರಿವೀರ ಬರಲು ನಿರಾಕರಿಸಿ ಆಕೆಯ ಮುಖವನ್ನೂ ನಾನು ನೋಡುವುದಿಲ್ಲ! ನೀವೇ ಹೋಗಿ ಎಂದು ಮಲಗಿದ್ದ ಜಾಗದಿಂದಲೇ ಗದರಿಸಿ ಕಳಿಸಿದ. ಕರಿವೀರನ ಎಡಗಾಲಿನಲ್ಲಿ ಗಡ್ಡೆಯಂತೆ ಬೆಳದಿದ್ದ ಕುರುವೊಂದು ದೊಡ್ಡದಾಗಿದ್ದರಿಂದ ಅವನ ನೋವು ಹೆಚ್ಚುತ್ತಲೇ ಇತ್ತು.

ಕಡಬನೂರು ಸ್ಟೇಷನ್‌ನಲ್ಲಿ ಎಲ್ಲರೆದುರಿಗೆ ದೊಡ್ಡ ಪಂಚಾಯಿತಿ ನಡೆದೇ ಹೋಯಿತು. ಊರಿನ ಯಜಮಾನರು, ಬಂಧುಬಳಗ ಪೊಲೀಸ್ ಅಧಿಕಾರಿಗಳು ಎಲ್ಲರೂ ಸೇರಿಕೊಂಡು ಚರ್ಚೆಯ ಮೇಲೆ ಚರ್ಚೆ ನಡೆದು ನ್ಯಾಯ ಬಗೆಹರಿಯದೆ ಮಧ್ಯರಾತ್ರಿಯವರೆಗೂ ಮುಂದುವರೆಯಿತು. ಅವರೆಲ್ಲರ ಎದುರಿಗೆ ಎಲ್ಲ ಪ್ರಶ್ನೆಗಳಿಗೂ ಅನ್ನಪೂರ್ಣಳೇ ದಿಟ್ಟವಾಗಿ ಉತ್ತರ ಕೊಡುತ್ತಿದ್ದಳು. ಶ್ರೀಕಂಠ ಒಂದು ಮಾತೂ ಆಡದೇ ಮೌನವಾಗಿಯೇ ಇದ್ದ. ಕೊನೆಯಲ್ಲಿ ಮಾತ್ರ ಅನ್ನಪೂರ್ಣ ಹೇಳಿದಂತೆ ನಡೆಯುತ್ತೇನೆ ಎಂದು ಹೇಳಿ ಮೌನವಾದ. ಪೊಲೀಸರಿಗೂ ಇದು ಸುಖಾಂತ್ಯ ಕಾಣಬೇಕಿತ್ತು, ಅಂದರೆ ಅವಳು ಮರಳಿ ಕರಿವೀರನ ಮನೆಗೆ ಹೋಗಬೇಕೆಂಬುದೇ ಅವರ ನಿಲುವಾಗಿತ್ತು. ಏಕೆಂದರೆ ಈ ರೀತಿಯ ಅಂತರ್ಜಾತಿ ಮದುವೆಯಂತಹ ಸೂಕ್ಷ್ಮ ವಿಷಯಗಳಲ್ಲಿ ಹಳ್ಳಿಗಳಲ್ಲಿ ಜಾತಿ ಜಾತಿಗಳ ನಡುವೆ ದೊಡ್ಡ ಜಗಳ ನಡೆದು, ಕೊನೆಗೆ ಅದು ಕೊಲೆಯಲ್ಲಿ ಸಮಾಪ್ತಿಗೊಳ್ಳುತ್ತಿದ್ದನ್ನು ಅವರು ಅನೇಕ ಸಲ ಕಂಡಿದ್ದರು. ಇದರ ಜೊತೆಗೆ ಈ ವಿಚಾರವಾಗಿಯೇ ಅನೇಕ ಹಳ್ಳಿಗಳಲ್ಲಿ ತಿಂಗಳುಗಳವರೆಗೆ ರಿಸರ್ವ್ ಪೊಲೀಸ್ ಇಟ್ಟ ಉದಾಹರಣೆಗಳು ಅವರ ಕಣ್ಣ ಮುಂದೆ ಇದ್ದವು.ಅದಕ್ಕಾಗಿ ಅವರಿಗೆ ಈ ಕೇಸು ಬೇಗ ಮುಗಿದರೆ ಸಾಕು ಎನಿಸಿತ್ತು.

ಅನ್ನಪೂರ್ಣ 'ನಾನು ಇಷ್ಟು ದಿನ ಆ ಮೂಕನಂತಹ ಗಂಡನೊಂದಿಗೆ ಯಾವುದೇ ಸುಖ ಕಾಣದೇ ನನ್ನ ಇಚ್ಛೆಯಂತೆ ಜೀವನ ಮಾಡದೇ ನಮ್ಮ ಅಮ್ಮನ ಮಾತಿಗೆ ಕಟ್ಟುಬಿದ್ದು ನೋವು ಸಹಿಸಿಕೊಂಡು ಬದುಕಿದೆ. ಇನ್ನಾದರೂ ನನ್ನ ಇಚ್ಛೆಯಂತೆ ಬದುಕು ಕಟ್ಟಿಕೊಳ್ಳಲಿಕ್ಕೆ ನನ್ನನ್ನು ಬಿಟ್ಟು ಬಿಡಿ. ಕಾನೂನು ಪ್ರಕಾರ ನಾನು ಡೈವರ್ಸ್ ಕೊಡ್ತೀನಿ. ನಮ್ಮ ವಿರುದ್ಧ ಯಾವುದೇ ಕೇಸು ಹಾಕಲಿಕ್ಕೆ ಬರುವುದಿಲ್ಲ. ನಾನೇ ಸ್ವ-ಇಚ್ಛೆಯಿಂದ ಒಪ್ಪಿಕೊಂಡು ಇವನ ಜೊತೆ ಹೋಗಿದ್ದೇನೆ. ನಾನು ನನ್ನ ಇಷ್ಟದಂತೆ ಶ್ರೀಕಂಠನ ಜೊತೆಗೇ ಜೀವನ ಮಾಡ್ತೀನಿ. ನನ್ನ ಮತ್ತು ಅವನ ಸುದ್ದಿಗೆ ಯಾರೂ ಬರಬೇಡಿ. ನಮ್ಮನ್ನ ನಮ್ಮ ಪಾಡಿಗೆ ಬಿಟ್ಟುಬಿಡಿ' ಎಂದು ಗಡುಸಾಗಿಯೆ ಹೇಳಿದಳು.

ಊರಿನವರು ಎಷ್ಟು ತಿಳಿಹೇಳಿದರೂ ಅವರ ಮಾತುಗಳನ್ನು ಅನ್ನಪೂರ್ಣ ಹತ್ತಿರವೇ ಬಿಟ್ಟುಕೊಳ್ಳಲಿಲ್ಲ. ಅವಳ ಖಡಕ್ಕಾದ ಮಾತುಗಳನ್ನು ಕೇಳಿದ ಊರಿನವರು ಕೊನೆಗೆ ಅನ್ನಪೂರ್ಣಳಿಗೆ ಅವಳ ಮಕ್ಕಳನ್ನು ತೋರಿಸಿ, ಈ ನಿನ್ನ ಮಕ್ಕಳು ಅನಾಥರಾಗುತ್ತಾರೆ. ಒಮ್ಮೆ ಆಲೋಚಿಸಮ್ಮ, ಇದೆಂತಹ ಹುಚ್ಚಾಟ ನಿನ್ನದು ಎಂದು ಅವಳ ದೊಡ್ಡಮ್ಮ ಹನುಮಕ್ಕ ಮತ್ತು ಅವಳ ಜೊತೆ ಬಂದಿದ್ದ ಊರಿನ ಕೆಲ ಹೆಂಗಸರು ಮತ್ತು ಹಿರಿಯರು ತಲೆಗೊಬ್ಬರಂತೆ ಅವಳಿಗೆ ತಿಳಿಹೇಳಿದರು. ಈ ಹಿಂದೆ ಊರಿನಲ್ಲಿ ಮತ್ತು ಅಕ್ಕಪಕ್ಕದ ಊರುಗಳಲ್ಲಿ ಜರುಗಿರುವ ಈ ರೀತಿಯ ಘಟನೆಗಳಲ್ಲಿ ಹೆಣ್ಣುಮಕ್ಕಳು ಅನುಭವಿಸಿದ ನೋವು ಯಾತನೆಗಳ ಬಗ್ಗೆ ಮತ್ತು ಆಕೆಯ ಮಕ್ಕಳ ಬಗ್ಗೆಯೇ ಹೆಚ್ಚು ಮಾತನಾಡಿ ಅವಳ ಮನಕರಗುವಂತೆ ಮಾಡಲು ಪ್ರಯತ್ನಿಸಿದರು. ಅವಳ ತಾಯಿ ಸುಭದ್ರಮ್ಮಳಂತೂ ಕೆಟ್ಟ ಕೆಟ್ಟ ಪದಗಳಿಂದ ಮಗಳನ್ನು ನಿಂದಿಸುತ್ತಲೇ ಗೋಳೋ ಎಂದು ಅಳುತ್ತಿದ್ದಳು. ಅಜ್ಜಿಯ ಜೊತೆಯಲ್ಲಿದ್ದ ಮೊಮ್ಮಕ್ಕಳು ತಮ್ಮ ತಾಯಿಯನ್ನು ನೋಡಿ ಬಿಕ್ಕಳಿಸಿ ಅಳುತ್ತಿದ್ದರು. ಮಕ್ಕಳನ್ನು ನೋಡುತ್ತಿದ್ದ ಅನ್ನಪೂರ್ಣಳ ಹೃದಯ ಮೆತ್ತಗಾಗತೊಡಗಿತು. ಅವಳು ಒಮ್ಮೆ ಶ್ರೀಕಂಠನತ್ತ ನೋಡಿದಳು. ಅವನಾದರೂ ತನಗೂ ಮಕ್ಕಳಿಗೂ ಯಾವುದೇ ಸಂಬಂಧವಿಲ್ಲವೆನ್ನುವಂತೆ ಆಕಾಶವನ್ನು ದಿಟ್ಟಿಸುತ್ತಾ ನಿಂತಿದ್ದ. ಇದೆಲ್ಲವನ್ನೂ ನೋಡಿ ಅನ್ನಪೂರ್ಣ ಮೌನಕ್ಕೆ ಶರಣಾದಳು.

ಸುರೇಶ ವೃತ್ತಿಯಿಂದ ವಕೀಲ. ತಾನು ಕೋರ್ಟಿನಲ್ಲಿ ಈ ರೀತಿಯ ಗಂಡ-ಹೆಂಡಿರ ಹಲವಾರು ಸಮಸ್ಯೆಗಳನ್ನು ನೋಡಿದ್ದವನು. ಇಂತಹ ಸಮಸ್ಯೆಗಳಿಂದ ನೊಂದಿರುವ ದಂಪತಿಗಳ ಮತ್ತು ಮಕ್ಕಳ ಅಳಲನ್ನು ಹತ್ತಿರದಿಂದ ಕೇಳಿಸಿಕೊಂಡವನು. ಇಂತಹ ಪ್ರಕರಣಗಳನ್ನು ನ್ಯಾಯಾಲಯದ ಆಚೆಗೆ ತಂದು, ದಂಪತಿಗಳಿಗೆ